ಮಾನ್ಯ ಸೀನಿಯರ್ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ
ಹರಿಹರ
ಅಸಲು ದಾವೆ ಸಂಖ್ಯೆ.108/2014

ವಾದಿಯರು : ಕೆ.ಆರ್.ಮಂಜುನಾಥ
ಮತ್ತು ಇನ್ನೊಬ್ಬ

-ವಿರುದ್ಧ-

ಪ್ರತಿವಾದಿಯರು : ರಾಮಪ್ಪ ತಂದೆ ಲೇಟ್ ಕುಂತೇರ ರಂಗಪ್ಪ
ಪೌತಿ ವಾರಸುದಾರರು
ಶ್ರೀಮತಿ ಹನುಮಮ್ಮ
ಮತ್ತು ಇತತರು

**ವಾದಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರ**

ನಾನು ಕೆ.ಆರ್.ಮಂಜುನಾಥ ತಂದೆ ಕೆ.ಜಿ.ರಂಗನಾಥ ವಯಸ್ಸು 38 ವರ್ಷ, ಉದ್ಯೋಗ ವ್ಯವಸಾಯ, ವಾಸ : ಹರಳಹಳ್ಳಿ ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ , ಆದ ನಾನು ದೇವರ ಹೆಸರಿನಲ್ಲಿ ಪ್ರಮಾಣ ಪೂರ್ವಕವಾಗಿ ಈ ಕೆಳಕಂಡಂತೆ ಸತ್ಯವಾಗಿ ಹೇಳುವುದೇನೆಂದರೆ:-

1) ನಾನು ಈ ಮೇಲ್ಕಂಡ ದಾವೆಯಲ್ಲಿ ವಾದಿ ನಂ.1 ಇರುತ್ತೇನೆ. ನನಗೆ ಈ ದಾವೆಯ ಸಂಪೂರ್ಣ ಮಾಹಿತಿ ಇರುತ್ತದೆ. ಈ ಮೇಲ್ಕಂಡ ದಾವೆಯಲ್ಲಿ ನಾನು ಪ್ರತಿವಾದಿಯರುಗಳ ವಿರುದ್ದ ಮಾಲಿಕತ್ವ ಘೋಷಣೆ ಮತ್ತು ಶಾಶ್ವತ ತಡೆಯಾಜ್ಞೆ ಕೋರಿ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಈ ದಾವೆಯ ವಾದ ಪತ್ರದಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನು ಈ ಪ್ರಮಾಣ ಪತ್ರದ ಒಂದು ಭಾಗವಾಗಿ ಓದಿಕೊಳ್ಳಬೇಕಾಗಿ ಪ್ರಾರ್ಥನೆ.

2) ನಾವುಗಳು ದಾವೆಯ ಷೆಡ್ಯೂಲ್ ಸೊತ್ತುಗಳ ಮಾಲೀಕರಿರುತ್ತೇವೆ ಮತ್ತು ಸ್ವಾಧೀನಾನುಭವದಾರಿರುತ್ತೇವೆ. ಈ ಹಿಂದೆ ನಮ್ಮಗಳ ಅಜ್ಜಂದಿರುಗಳಾದ ಹಿರಿಯ ಮಗ ಗೋವಿಂದಪ್ಪ ಎರಡನೇ ಮಗನಾದ ಹನುಮಂತಪ್ಪ ಇವರುಗಳ ತಂದೆ ಕೂಂತೇರ ಸಣ್ಣರಂಗಪ್ಪ ಇವರುಗಳು ಒಟ್ಟು ಕುಟುಂಬದಲ್ಲಿದ್ದಾಗ 2ನೇ ಮಗ ಹನುಮಂತಪ್ಪ ತಂದೆ ಲೇಟ್ ಕುಂತೇರ ಸಣ್ಣರಂಗಪ್ಪನವರಿಗೆ ಪ್ರತಿವಾದಿ ನಂ.1 ರವರ ಗಂಡನಾದ ಮತ್ತು ಪ್ರತಿವಾದಿ ನಂ1(ಬಿ) ರವರ ತಂದೆಯಾದ ಶ್ರೀ ರಾಮಪ್ಪ ತಂದೆ ಲೇಟ್ ರಂಗಪ್ಪ ಮತ್ತು ಪ್ರತಿವಾದಿ ನಂ. 2(ಎ) ರವರ ಗಂಡನಾದ ಮತ್ತು ಪ್ರತಿವಾದಿ ನಂ.2(ಬಿ) ರಿಂದ 2(ಹೆಚ್) ರವರುಗಳ ತಂದೆಯಾದ ಶೀನಪ್ಪ ತಂದೆ ಲೇಟ್ ರಂಗಪ್ಪ ಹಾಗೂ ಪ್ರತಿವಾದಿ ನಂ.4 ರವರುಗಳು ಸೇರಿ ರಾಮಪ್ಪ ತಂದೆ ಲೇಟ್ ರಂಗಪ್ಪ ನವರ ಹೆಸರಿಗೆ ಖಾತೆ ಇರುವ ಸ್ವಾಧೀನಾನುಭವದಲ್ಲಿರುವ ಹರಿಹರ ತಾಲ್ಲೂಕು, ಹರಳಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೇ ನಂ.9/2 ರಲ್ಲಿ 30 ಎಕರೆ, 17 ರಲ್ಲಿ 21 ಎಕರೆ 22 ಗುಂಟೆ ಜಮೀನುಗಳನ್ನು ಪೂರ್ವದಿಕ್ಕಿನ ಕಡೆಯ 10 ಎಕರೆ ಜಮೀನುಗಳ ಚಕ್ಕುಬಂದಿ ಪೂರ್ವಕ್ಕೆ :- ಕುಂಬಳೂರು ದೊಡ್ಡ ಹನುಮಂತಪ್ಪನವರ ಜಮೀನುಗಳು ಪಶ್ಚಿಮಕ್ಕೆ :- ಇದೇ ನಂಬರಿನ ಕ್ರಯಕ್ಕೆ ಕೊಟ್ಟ ಉಳಿದ ಜಮೀನು, ಉತ್ತರಕ್ಕೆ :- ಮುಡ್ಲಾಬಸಪುರ ಗಡಿ ಮತ್ತು ದಕ್ಷಿಣಕ್ಕೆ:- ರಿ.ಸ.ನಂ.27 ಜಮೀನುಗಳು ಈ ಸೊತ್ತನ್ನು ದಿನಾಂಕ:-24/6/1948 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಕೊಟ್ಟಿರುತ್ತಾರೆ. ನಮ್ಮಗಳ ಅಜ್ಜನಾದ 2ನೇ ಮಗ ಹನುಮಂತಪ್ಪ ನವರು ದಿನಾಂಕ:-24/6/1948 ರಲ್ಲಿ ನೊಂದಾಯಿತ ಕ್ರಯ ಪತ್ರದ ಮೂಲಕ ತೆಗೆದುಕೊಂಡು ನಂತರ ತಹಶೀಲ್ದಾರ್ ಕಛೇರಿಗೆ ಖಾತೆ ಬದಲಾವಣೆ ಮಾಡಲು ಅರ್ಜಿಯನ್ನು ಕೊಟ್ಟಿರುತ್ತಾರೆ.

No of Corrections: - Nil

K.R. Manjunatha

ಅರ್ಜಿಯಂತೆ ತಹಶೀಲ್ದಾರ್ ಕಛೇರಿಯಲ್ಲಿ ಎಂ.ಆರ್. ನಂ.7/47-48 ರಲ್ಲಿ ನಮ್ಮಗಳ ಅಜ್ಜನಾದ 2ನೇ ಮಗ ಹನುಮಂತಪ್ಪ ತಂದೆ ಲೇಟ್ ಕೂಂತೇರ ಸಣ್ಣರಂಗಪ್ಪನವರಿಗೆ ಮುಟೇಷನ್ ನಮೂದಿಸಿರುತ್ತಾರೆ. ಆದೇ ತರಹ ನಮ್ಮಗಳ ಅಜ್ಜನಾದ ಹನುಮಂತಪ್ಪ ತಂದೆ ಲೇಟ್ ಕುಂತೇರ ಸಣ್ಣರಂಗಪ್ಪನವರ ಹೆಸರಿನಲ್ಲಿ ಕಂದಾಯ ಇಲಾಖೆಯವರು ಆರ್.ಆರ್.5 ಮತ್ತು ಆರ್.ಆರ್.6 ನಲ್ಲಿ ನಮೂದಿಸಿರುತ್ತಾರೆ. ತದನಂತರ ನಮ್ಮಗಳ ಅಜ್ಜಂದಿರುಗಳಾದ ಹಿರಿಯ ಮಗ ಗೋವಿಂದಪ್ಪ ಮತ್ತು 2ನೇ ಮಗ ಹನುಮಂತಪ್ಪ ಇವರುಗಳ ತಂದೆ ಲೇಟ್ ಸಣ್ಣರಂಗಪ್ಪ ಒಟ್ಟು ಕುಟುಂಬದಲ್ಲಿದ್ದಾಗ ನಾವುಗಳು ಷೆಡ್ಯೂಲ್ ಸೊತ್ತುಗಳ ಮಾಲೀಕರುಗಳು ಮತ್ತು ಸ್ವಾಧೀನಾನುಭವದಾರರು ಇರುತ್ತೇವೆ. ಇವರುಗಳ ಪೌತಿ ನಂತರ ನಾವುಗಳು ದಾವೆಯ ಷೆಡ್ಯೂಲ್ ಸೊತ್ತುಗಳಲ್ಲಿ ಸಾಗುವಳಿದಾರರಿರುತ್ತೇವೆ.

3) ನಮ್ಮಗಳ ಅಜ್ಜಂದಿರುಗಳಾದ 1) ಗೋವಿಂದಪ್ಪ ತಂದೆ ಕೂಂತೇರ ಸಣ್ಣರಂಗಪ್ಪ 2) ಹನುಮಂತಪ್ಪ ತಂದೆ ಕುಂತೇರ ಸಣ್ಣರಂಗಪ್ಪ ಒಟ್ಟುಕುಟುಂಬದಲ್ಲಿದ್ದಾಗ ದಾವೆಯ ಷೆಡ್ಯೂಲ್ ಸೊತ್ತುಗಳನ್ನು ಪ್ರತಿವಾದಿ ನಂ.3 ಮತ್ತು ಪ್ರತಿವಾದಿ ನಂ.1(ಎ) ಗಂಡ ಮತ್ತು ಪ್ರತಿವಾದಿ ನಂ.1(ಬಿ) ತಂದೆ ರಾಮಪ್ಪ ತಂದೆ ರಂಗಪ್ಪ ಹಾಗೂ ಪ್ರತಿವಾದಿ ನಂ.1(ಎ) ಗಂಡ 2(ಬಿ) ರಿಂದ 2(ಹೆಚ್) ರವರ ತಂದೆ ಶೀನಪ್ಪ ತಂದೆ ರಂಗಪ್ಪ ಇವರಿಂದ ದಿನಾಂಕ:-24/06/1948 ರಲ್ಲಿ, ಎಸ್.ಆರ್.ನಂ. 980/47-48 ರಲ್ಲಿ ನಮ್ಮಗಳ 2ನೇ ಅಜ್ಜನಾದ ಹನುಮಂತಪ್ಪ ತಂದೆ ಕುಂತೇರ ಸಣ್ಣರಂಗಪ್ಪ ಇವರಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಕೊಟ್ಟಿರುತ್ತಾರೆ. ಸ್ವಾಧೀನಾನುಭವದಲ್ಲಿ 1964 ರ ವರೆಗೂ ಸಾಗುವಳಿದಾರರು ಇದ್ದು, ತದನಂತರ ನಮ್ಮಗಳ ಅಜ್ಜಂದಿರುಗಳಾದ 1ನೇ ಗೋವಿಂದಪ್ಪ ತಂದೆ ಲೇಟ್ ಕುಂತೇರ ಸಣ್ಣರಂಗಪ್ಪ ಪೌತಿ ನಂತರ ಮಗನಾದ ನೇರ ವಾರಸುದಾರರಾದ ಕೆ.ಜಿ.ರಂಗನಾಥ ತಾಯಿ ಸಣ್ಣಮ್ಮ ಕೋಂ ಲೇಟ್ ಗೋವಿಂದಪ್ಪ ಮತ್ತು ನಮ್ಮಗಳ ತಂದೆಯಾದ ರಂಗನಾಥ ಮೈನರ್ ಗಾರ್ಡಿಯನ್ ತಾಯಿ ಸಣ್ಣತಾಯಮ್ಮ ಕೋಂ ಗೋವಿಂದಪ್ಪ ಮತ್ತು ನಮ್ಮಗಳ 2ನೇ ಅಜ್ಜನಾದ ಹನುಮಂತಪ್ಪ ತಂದೆ ಸಣ್ಣರಂಗಪ್ಪ ನವರುಗಳು ಒಟ್ಟುಕುಟುಂಬದಲ್ಲಿ ಸರಿಬರದ ಕಾರಣ ದಿನಾಂಕ:-27/07/1965 ರಲ್ಲಿ ಎಸ್.ಆರ್. ನಂ.1010/1965-66 ರಲ್ಲಿ ನೊಂದಾಯಿತ ಪಾಲುವಿಭಾಗ ಪತ್ರದ ಮೂಲಕ ತಲಾ 5 ಎಕರೆಯಂತೆ ಹಿಸ್ಸೆಯನ್ನು ಮಾಡಿಕೊಂಡಿರುತ್ತೇವೆ. ತದನಂತರ ತಹಶೀಲ್ದಾರ್ ಕಛೇರಿ ಮುಟೇಷನ್ ನಮೂದಿಸಿಕೊಂಡಿರುತ್ತಾರೆ. ಎಂ.ಆರ್. ನಂ.10/65-66 ಎಂ.ಸಿ.ಆರ್. 832/65-66 ದಿನಾಂಕ:-19/01/1966 ರಲ್ಲಿ ತಹಶೀಲ್ದಾರ್ ಕಛೇರಿಯ ಕಂದಾಯ ಇಲಾಖೆಯಲ್ಲಿ ಮುಟೇಷನ್‌ಗಳಿಗೆ ನಂಬರ್ ಕೊಟ್ಟು ನಮೂದಿಸಿರುತ್ತಾರೆ. ಆದರೆ ಹೊಸ ಗಣಕೀಕೃತ ಪಹಣಿಯಲ್ಲಿ ನಮೂದು ಮಾಡಿರುವುದಿಲ್ಲ. ಕಾರಣ ಸ್ವಾಧೀನಾನುಭವದಲ್ಲಿ ಸಾಗುವಳಿದಾರರು ಇರುತ್ತೇವೆ ಎಂದು ಸುಮ್ಮನೆ ಇದ್ದರು. ಅದೇ ರೀತಿ ಹರಿಹರ ತಾಲ್ಲೂಕು, ಉಪನೊಂದಾಣಾಧಿಕಾಗಳ ಕಛೇರಿಯಲ್ಲಿ 1948 ರಿಂದ ಋಣಭಾರ ಪತ್ರದಲ್ಲಿ ಕ್ರಯದಾರರು ನಮ್ಮಗಳ 2ನೇ ಅಜ್ಜನಾದ ಹನುಮಂತಪ್ಪ ತಂದೆ ಸಣ್ಣರಂಗಪ್ಪ ಎಂದು ನಮೂದಾಗಿರುತ್ತದೆ. ಅದೇ ರೀತಿ 27/07/1965 ರಲ್ಲಿ ನೊಂದಾಯಿತ ಪಾಲುವಿಭಾಗ ಪತ್ರ ಮಾಡಿಕೊಂಡಾಗ ತಲಾ 5 ಎಕರೆಯಂತೆ ಋಣಭಾರ ಪತ್ರದಲ್ಲಿ ನಮೂದಿಸಿರುತ್ತಾರೆ. ಇದೆಲ್ಲಾ ವಿಚಾರವು ಪ್ರತಿವಾದಿ ನಂ.1(ಎ) ಮತ್ತು 1(ಬಿ) ರವರಿಗೆ ಗೊತ್ತಿದ್ದರೂ ಸಹ ಪ್ರತಿವಾದಿ ನಂ.1(ಎ) ರವರ ಗಂಡನಾದ ರಾಮಪ್ಪ ತಂದ ರಂಗಪ್ಪ ಪೌತಿ ನಂತರ ಖಾತೆ ಬದಲಾವಣೆ ಮೇರೆಗೆ ಪ್ರತಿವಾದಿ ನಂ.(ಎ) ತಮ್ಮ ಹೆಸರಿಗೆ ಪಹಣಿಯಲ್ಲಿ ನಮೂದಿಸಿ ಕೊಂಡಿರುತ್ತಾರೆ. ಆದರೆ ನಾವುಗಳು ದಾವೆಯ ಷೆಡ್ಯೂಲ್ ಸೊತ್ತುಗಳಲ್ಲಿ ಮಾಲೀಕರು ಶಾಂತಿಯು ಸ್ವಾಧೀನಾನುಭವದಾರರು ಇರುತ್ತೇವೆ.

4) ನಮ್ಮಗಳ ದಾವೆಯ ಷೆಡ್ಯೂಲ್ ಸೊತ್ತುಗಳ ಹೊಸ ಪಹಣಿಯಲ್ಲಿ ನಮ್ಮಗಳ 2ನೇ ಅಜ್ಜನಾದ ಹನುಮಂತಪ್ಪ ತಂದೆ ಸಣ್ಣರಂಗಪ್ಪ ಇವರ ಹೆಸರಿಗೆ ಇಲ್ಲದೆ ಇರುವುದನ್ನು ನೋಡಿದ ಪ್ರತಿವಾದಿ ನಂ.1(ಎ) ತಮ್ಮ ಗಂಡನಾದ ರಾಮಪ್ಪನವರ ಪೌತಿ ನಂತರ ಖಾತೆ ಬದಲಾವಣೆ ಮಾಡಿಸಿ ಕೊಂಡಿರುತ್ತಾರೆ. ಆದೇ ರೀತಿ ಪ್ರತಿವಾದಿ ನಂ.4 ರವರ ಗಂಡ ಕೃಷ್ಣಪ್ಪ ಪೌತಿಯ ನಂತರ ಮತ್ತು 5

K.R. Manjunatha.

ರಿಂದ 9 ರವರ ತಂದೆಯಾದ ಕೃಷ್ಣಪ್ಪನವರ ಹೆಸರಿನಲ್ಲಿ ಹಾಲಿ ಪಹಣೀಯು ಚಾಲ್ತಿ ಇರುವುದರಿಂದ ಪ್ರತಿವಾದಿ ನಂ.1(ಎ) ಮತ್ತು ಪ್ರತಿವಾದಿ ನಂ.1(ಬಿ), ಇವರಲ್ಲಿ ಪ್ರತಿವಾದಿ ನಂ.1(ಬಿ) ರವರು ಪ್ರತಿವಾದಿ ನಂ.1(ಎ) 2(ಎ) ರಿಂದ 2(ಹೆಚ್) ರವರು ಮತ್ತು ಪ್ರತಿವಾದಿ ನಂ.3, ಪ್ರತಿವಾದಿ ನಂ.4 ರಿಂದ 9 ರವರುಗಳ ವಿರುದ್ಧ ಪಾಲುವಿಭಾಗಕ್ಕಾಗಿ ದಾವೆಯನ್ನು ಮಾನ್ಯ ಸೀನಿಯರ್ ಸಿವಿಲ್ ಜಡ್ಜ್ ನ್ಯಾಯಾಲಯ ಹರಿಹರದಲ್ಲಿ ಅಸಲು ದಾವೆ ಸಂಖ್ಯೆ.312/2002 ಹಾಕಿರುತ್ತಾರೆ. ಆದರೆ ನಮ್ಮಗಳ ಅಜ್ಜಂದಿರುಗಳಾದ 1ನೇ ಗೋವಿಂದಪ್ಪ ತಂದೆ ಸಣ್ಣರಂಗಪ್ಪ ಮತ್ತು 2ನೇ ಹನುಮಂತಪ್ಪ ತಂದೆ ಸಣ್ಣರಂಗಪ್ಪನವರು ಕ್ರಯದಾರರಿರುತ್ತಾರೆ. ಇವರುಗಳನ್ನು ಈ ಕೇಸಿನಲ್ಲಿ ಪಕ್ಷಗಾರರಾಗಿ ಸೇರಿಸಿಕೊಂಡಿರುವುದಿಲ್ಲ. ಇವರುಗಳ ಪೌತಿ ನಂತರ ವಾರಸುದಾರರಾದ ನಮ್ಮಗಳನ್ನು ಕೇಸಿನಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ. ಕಾರಣ ನಮ್ಮಗಳ 2ನೇ ಅಜ್ಜನಾದ ಹನುಮಂತಪ್ಪ ತಂದೆ ಸಣ್ಣರಂಗಪ್ಪ ನವರು ಕ್ರಯಕ್ಕೆ ದಿನಾಂಕ:-24/06/1948 ರಲ್ಲಿ ಎಸ್.ಆರ್. ನಂ.980/47-48 ರಲ್ಲಿ ಸರ್ವೆ ನಂ.9/2 ರಲ್ಲಿ 10 ಎಕರೆ ಕ್ರಯಕ್ಕೆ ತೆಗೆದುಕೊಂಡಿರುತ್ತಾರೆ. ಮತ್ತು ಪಹಣಿ ಹೆಸರಿಗೆ ಇರುವುದಿಲ್ಲ ಎಂದು ವಿಚಾರ ಗೊತ್ತಾಗಿ ನಮ್ಮಗಳ ಅಜ್ಜಂದಿರುಗಳು ಕ್ರಯಕ್ಕೆ ತೆಗದುಕೊಂಡ ದಾವೆ ಷೆಡ್ಯೂಲ್ ಸೊತ್ತನ್ನು ಕೊಡಬಾರದು ಎಂಬ ಉದ್ದೇಶ ಪೂರ್ವಕವಾಗಿ ಮತ್ತು ನಮ್ಮಗಳಿಗೆ ಮೋಸಮಾಡಬೇಕೆಂಬ ಉದ್ದೇಶದಿಂದ ಪ್ರತಿವಾದಿ ನಂ.1(ಬಿ) ಮತ್ತು ಪ್ರತಿವಾದಿ ನಂ1(ಎ), 2(ಎ) ರಿಂದ 2(ಹೆಚ್) ರವರು, ಪ್ರತಿವಾದಿ ನಂ.3, ಪ್ರತಿವಾದಿ ನಂ.4 ರಿಂದ 9 ರವರು ಮಿಲಾಪಿಯಾಗಿ ಅಸಲು ದಾವೆ ಸಂಖ್ಯೆ.312/2002 ರಲ್ಲಿ ಪಾಲುವಿಭಾಗ ದಾವೆಯನ್ನು ಮಾನ್ಯ ಸೀನಿಯರ್ ಸಿವಿಲ್ ಜಡ್ಜ್‌ರವರ ನ್ಯಾಯಾಲಯ ಹರಿಹರದಲ್ಲಿ ದಿನಾಂಕ:-10/10/2011ರಲ್ಲಿ ಡಿಕ್ರಿಯನ್ನು ಪಡೆದುಕೊಂಡಿರುತ್ತಾರೆ. ಇದರಲ್ಲಿ ಪ್ರತಿವಾದಿ ನಂ.4 ರಿಂದ 9 ರವರುಗಳು ಡಿಕ್ರಿಯ ವಿರುದ್ಧ ಮಾನ್ಯ ಕರ್ನಾಟಕ ಹೈಕೋರ್ಟನಲ್ಲಿ ಆರ್.ಎಫ್.ಎ.86/2012 ಅಪೀಲನ್ನು ಸಲ್ಲಿಸಿರುತ್ತಾರೆ. ಈ ವಿಚಾರ ನಮ್ಮಗಳಿಗೆ ಗೊತ್ತಾಗಿ ನಾವುಗಳು ದಿನಾಂಕ:-23/10/2013 ರಲ್ಲಿ ಮಾನ್ಯ ಕರ್ನಾಟಕ ಹೈಕೋರ್ಟ ನ್ಯಾಯಾಲಯದಲ್ಲಿ ಬೆಂಗಳೂರು U/O 1(10) ಅಡಿಯಲ್ಲಿ ಸೇರ್ಪಡೆ ಮಾಡಿ ಎಂದು ಮಧ್ಯಂತರ ಅರ್ಜಿಯನ್ನು ಹಾಕಿರುತ್ತೇವೆ, ನಮ್ಮಗಳ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದೆ ಆರ್.ಎಫ್.ಎ. ನಂ.86/2012 ರಲ್ಲಿ ಪಕ್ಷಗಾರರಾಗಿ ಸೇರ್ಪಡೆಯಾಗಿರುತ್ತದೆ. ಎದುರುದಾರರು 10, 11, 12 ತಿದ್ದುಪಡೆ ಮಾಡಿರುತ್ತಾರೆ. ಆದ್ದರಿಂದ ಮಾನ್ಯ ನ್ಯಾಯಾಲಯದಲ್ಲಿ ನಮ್ಮಗಳನ್ನು ದಾವೆಯ ಷೆಡ್ಯೂಲ್ ಸೊತ್ತುಗಳ ಮಾಲೀಕರೆಂದು ಘೋಷಿಸಬೇಕೆಂದು ಮತ್ತು ನಮ್ಮಗಳ ಶಾಂತಿಯುತ ಸ್ವಾಧೀನಾನುಭವಕ್ಕೆ ತೊಂದರೆಯಾಗದಂತೆ ಶಾಶ್ವತ ನಿರ್ಭಂದಕಾಜ್ಞೆ ನೀಡಬೇಕೆಂದು ಮಾನ್ಯ ನ್ಯಾಯಾಲಯದಲ್ಲಿ ಈ ದಾವೆಯನ್ನು ಸಲ್ಲಿಸಿರುತ್ತೇವೆ.

5) ನಮ್ಮಗಳ ದಾವೆಯ ಷೆಡ್ಯೂಲ್ ಸೊತ್ತುಗಳ ಮೇಲೆ ಮಾನ್ಯ ಸೀನಿಯರ್ ಸಿವಿಲ್ ಜಡ್ಜ್‌ರವರ ನ್ಯಾಯಾಲಯದಲ್ಲಿ ದಿನಾಂಕ:-10/10/2011 ರಲ್ಲಿ ಡಿಕ್ರಿಯಲ್ಲಿ ಪ್ರತಿವಾದಿ ನಂ.1(ಬಿ), ಪ್ರತಿವಾದಿ ನಂ.1(ಎ) ಮತ್ತು 2(ಎ) ರಿಂದ 2(ಹೆಚ್), ಪ್ರತಿವಾದಿ ನಂ.3 ಮತ್ತು ಪ್ರತಿವಾದಿ ನಂ.4 ರಿಂದ 9 ರವರ ಹಿಸ್ಸೆಯನ್ನು ಪಡೆದುಕೊಂಡಿರುತ್ತಾರೆ. ಆದರೆ ಈಗಾ ಮಾನ್ಯ ಕರ್ನಾಟಕ ಹೈಕೋರ್ಟನ ನ್ಯಾಯಾಲಯದಲ್ಲಿ ಆರ್.ಎಫ್.ಎ.86/2012 ರ ಕೇಸಿನ ವಿಚಾರಣೆ ಹಂತದಲ್ಲಿ ಇದ್ದು, ನಾವುಗಳು ಮಾನ್ಯ ನ್ಯಾಯಾಲಯದಲ್ಲಿ ಪ್ರಾರ್ಥನೆ ಏನೆಂದರೆ, ದಾವೆಯ ಷೆಡ್ಯೂಲ್ ಸೊತ್ತುಗಳ ಮಾಲೀಕರೆಂದು ಘೋಷಿಸಿ ಮತ್ತು ಶಾಶ್ವತ ನಿರ್ಭದಂಕ ತಡೆಯಾಜ್ಞೆಯನ್ನು ನೀಡಬೇಕೆಂದು ಪ್ರಾರ್ಥನೆ. ತದನಂತರ ದಾವೆಯ ಷೆಡ್ಯೂಲ್ ಸೊತ್ತುಗಳ ಬಿಟ್ಟು ಉಳಿದಿರುವ ಸೊತ್ತುಗಳಲ್ಲಿ ಪ್ರತಿವಾದಿ ನಂ.1(ಎ) ಮತ್ತು ಪ್ರತಿವಾದಿ ನಂ.1(ಬಿ), 2(ಎ) ರಿಂದ 2(ಹೆಚ್) ರವರು ಮತ್ತು ಪ್ರತಿವಾದಿ ನಂ.3 ಹಾಗೂ ಪ್ರತಿವಾದಿ ನಂ.4 ರಿಂದ 9 ರವರ ಹಿಸ್ಸೆ ಭಾಗವನ್ನು ಪಡೆದುಕೊಳ್ಳಲು ನಮ್ಮಗಳ ಯಾವುದೇ ತಕರಾರು ಇರುವುದಿಲ್ಲ. ಕಾರಣ ಪ್ರತಿವಾದಿ ನಂ.1(ಬಿ) ಇವರು ಪ್ರತಿವಾದಿ ನಂ.1(ಎ), ಪ್ರತಿವಾದಿ ನಂ.2(ಎ) ರಿಂದ 2(ಹೆಚ್) ಪ್ರತಿವಾದಿ ನಂ.3 ಮತ್ತು ಪ್ರತಿವಾದಿ ನಂ.4 ರಿಂದ 9 ರವರುಗಳು ಮಾನ್ಯ ಸೀನಿಯರ್ ಸಿವಿಲ್ ಜಡ್ಜ್ ರವರ ನ್ಯಾಯಾಲಯದ ಅಸಲು ದಾವೆ ಸಂಖ್ಯೆ.312/2002 ರಲ್ಲಿ ಕೇಸಿನಲ್ಲಿ ನಮ್ಮಗಳ 2ನೇ ಅಜ್ಜನಾದ ಹನುಮಂತಪ್ಪ ತಂದೆ ಸಣ್ಣರಂಗಪ್ಪ ನವರಿಗೆ ದಿನಾಂಕ:-

K. R. Manjunatha

24/6/1948 ರಲ್ಲಿ ಪ್ರತಿವಾದಿ ನಂ.1(ಎ) ಗಂಡ ಪ್ರತಿವಾದಿ ನಂ.1(ಬಿ) ರವರ ತಂದೆ ರಾಮಪ್ಪ ತಂದೆ ರಂಗಪ್ಪ ಅದೇ ರೀತಿ ಪ್ರತಿವಾದಿ ನಂ.2(ಎ) ಗಂಡ ಮತ್ತು 2(ಬಿ) ರಿಂದ 2(ಹೆಚ್) ರವರ ತಂದೆಯಾದ ಶೀನಪ್ಪನವರು ಪ್ರತಿವಾದಿ ನಂ.3 ರವರಿಂದ ಕ್ರಯಕ್ಕೆ ಕೊಟ್ಟಿರುತ್ತೇವೆ ಎಂದು ಒಪ್ಪಿ ಕೊಂಡಿರುತ್ತಾರೆ. ಆದರೆ ಪಹಣಿ ಮಾತ್ರ ನಮ್ಮ ಹೆಸರಿಗೆ ಇದೇ ಎಂದು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಮಾನ್ಯ ನ್ಯಾಯಾಲಯವು ನಮ್ಮಗಳ ದಾವೆಯ ಷೆಡ್ಯೂಲ್ ಸೊತ್ತುಗಳ ಮಾಲೀಕರೆಂದು ಘೋಷಿಸುವವರೆಗೂ ಪ್ರತಿವಾದಿ ನಂ.1(ಎ) ಮತ್ತು 1(ಬಿ), 2(ಎ) ರಿಂದ 2(ಹೆಚ್), ಪ್ರತಿವಾದಿ ನಂ.3 ಮತ್ತು ಪ್ರತಿವಾದಿ ನಂ.4 ರಿಂದ 9 ರವರು ಎಫ.ಡಿ.ಪಿ ಕೇಸು ಹಾಕಿದರೆ, ಎಫ.ಡಿ.ಪಿ ಕೇಸಿನಲ್ಲಿ ಡಿಕ್ರಿಯನ್ನು ಮಾಡದಂತೆ ತಡೆಯಾಜ್ಞೆ ಮಾಡಬೇಕೆಂದು ಮಾನ್ಯ ನ್ಯಾಯಾಲಯದಲ್ಲಿ ಪ್ರಾರ್ಥನೆ.

ಈ ಮೇಲೆ ಹೇಳಿರುವ ಎಲ್ಲಾ ವಿಷಯಗಳು ನನಗೆ ತಿಳಿದ ಮಟ್ಟಿಗೆ ಸತ್ಯವಾಗಿರುತ್ತವೆ ಎಂದು ಹಾಗೂ ಇದೇ ನನ್ನ ಹೆಸರು ಮತ್ತು ಸಹಿ ಎಂದು ಪ್ರಮಾಣೀಕರಿಸುತ್ತೇನೆ.

K.R. Manjunatha

ಪ್ರಮಾಣಕರ್ತ

ಗುರುತಿಸುವವರು

H Thippanna

ವಕೀಲರು

ದಿನಾಂಕ:-15/04/2015

ಸ್ಥಳ:-ಹರಿಹರ

Identify attested/sworn to before me this the 15th day of APR 2015

HRR Oath Commissioner

Oath Commissioner, Court (C.J.M.C.), Harihara

No of Corrections - N